

# ಪಿರಮಿಡ್‌ಗಳ ದೇವನಗರಿ ಟಿಯೋಟಿಹುಕಾನ್

ನಾಗರಿಕತೆಯ ಇತಿಹಾಸವನ್ನು ತನ್ನೊಳಗೆ ಹುದುಗಿಟ್ಟುಕೊಂಡಿರುವ ಟಿಯೋಟಿಹುಕಾನ್‌ನ ಪಿರಮಿಡ್‌ಗಳು ಆಕರ್ಷಕ ಭಿತ್ತಿಚಿತ್ರಗಳು ಹಾಗೂ ಕಲಾರಚನೆಗಳಿಂದ ಗಮನ ಸೆಳೆಯುತ್ತವೆ. ಮೆಕ್ಸಿಕೊದ ಕೇಂದ್ರ ಬಿಂದುವಾಗಿರುವ ಈ ಸ್ಥಳ ವಿಶ್ವ ಪಾರಂಪರಿಕ ತಾಣವಾಗಿ ಗುರ್ತಿಸಿಕೊಂಡಿದೆ.

■ ಎಸ್‌ ಪ್ರಭಾವತಿ

ಕೊರೊನಾ ಸಮಯದಲ್ಲಿ ಅಮೆರಿಕದಲ್ಲಿದ್ದ ಮಕ್ಕಳು, ಮೊಮ್ಮಕ್ಕಳನ್ನು ನೋಡಲೇಬೇಕಾದ ಪರಿಸ್ಥಿತಿ ನಮಗೆ ಬಂತು. ಆದರೆ ನಿರ್ಬಂಧಗಳ ಕಾರಣದಿಂದಾಗಿ, ಅಮೆರಿಕಕ್ಕೆ ಹೋಗುವ ಎಂದಿನ ಮಾರ್ಗ ಪ್ರಯಾಣಕ್ಕೆ ಲಭ್ಯವಿರಲಿಲ್ಲ. ಬೇರೆ ಮಾರ್ಗದ ಮೂಲಕ ಅಲ್ಲಿಗೆ ತಲುಪಬೇಕಾಗಿತ್ತು. ಆಗ ನಮಗೆ ಹೊಳೆದದ್ದು ಮೆಕ್ಸಿಕೊ ಮೂಲಕ ಹೋಗುವುದು.

ಭಾರತದಿಂದ ಮೆಕ್ಸಿಕೊ ತಲುಪಿದ ನಾವು, ಅಮೆರಿಕಕ್ಕೆ ಹೋಗಲು ದಿನಗಳೆಣಿಸುತ್ತಿದ್ದೆವು. ಮೆಕ್ಸಿಕೊದ ಅಪಾರ್ಟ್‌ಮೆಂಟೊಂದರಲ್ಲಿ 15 ದಿನಗಳ ಕಾಲ ‘ಮನೆ ವಾಸ’ದಲ್ಲಿದ್ದೆವು. ಅದೇ ಸಮಯದಲ್ಲಿ, ನಾವಿದ್ದ ಅಪಾರ್ಟ್‌ಮೆಂಟ್‌ನಿಂದ ಒಂದಷ್ಟು ದೂರದಲ್ಲಿ ಮೆಕ್ಸಿಕೊದ ಪ್ರಸಿದ್ಧ ಪಿರಮಿಡ್‌ಗಳ ತಾಣ ‘ಟಿಯೋಟಿಹುಕಾನ್’ ಇರುವುದು ತಿಳಿದುಬಂತು.

ಟ್ಯಾಕ್ಸಿಯಲ್ಲಿ ಹೋಗುವುದಿದ್ದರೆ ಕೇವಲ ಒಂದು ಗಂಟೆಯ ಪ್ರಯಾಣ ಎನ್ನುವ ವಿಷಯ ತಿಳಿದಾಗ, ಅಲ್ಲಿಗೆ ಹೋಗುವ ಬಯಕೆ ಮತ್ತಷ್ಟು ಹೆಚ್ಚಾಯಿತು. ನಮ್ಮನ್ನು ಅಮೆರಿಕಕ್ಕೆ ಕರೆದೊಯ್ಯಲು ಬಂದಿದ್ದ ಮಗನೊಡನೆ ಈ ವಿಷಯ ಹೇಳಿ ಅವನೊಂದಿಗೆ ಅಲ್ಲಿಗೆ ಹೊರಡಲು ಅಣಿಯಾದೆವು.

ಮೆಕ್ಸಿಕೊ ನಗರದ ಈಶಾನ್ಯಕ್ಕೆ ಕೇವಲ 50 ಕಿ.ಮೀ. ದೂರದಲ್ಲಿರುವ ಟಿಯೋಟಿಹುಕಾನ್, ತನ್ನ ಪಿರಮಿಡ್‌ಗಳ ಸಂಕೀರ್ಣದಿಂದಾಗಿ ಜಗತ್ಪ್ರಸಿದ್ಧಿ ಪಡೆದಿದೆ. ಆಧುನಿಕ ಮೆಕ್ಸಿಕೊ ನಗರದ ಹೊರವಲಯದಲ್ಲಿದೆ ಈ ಪಿರಮಿಡ್ ಸಂಕೀರ್ಣ. ಕೊಲಂಬಿಯನ್ ಪೂರ್ವದ ಇತಿಹಾಸ–ಪರಂಪರೆಯನ್ನು ತನ್ನಲ್ಲಿಟ್ಟುಕೊಂಡು ಬಂದಿರುವ ಈ ಪಿರಮಿಡ್‌ಗಳನ್ನು ನೋಡಲು ಬೇರೆಬೇರೆ ದೇಶಗಳಿಂದ ಸಾವಿರಾರು ಜನ ಬರುತ್ತಾರೆ. 1987ರಲ್ಲಿ ಇದು ಯುನೆಸ್ಕೊದ ಪಾರಂಪರಿಕ ತಾಣವಾಗಿಯೂ ಗುರುತಿಸಿಕೊಂಡಿದೆ.

### ‘ದೇವರ ನಗರ’ದ ಕಲಾಲೋಕ

ಟಿಯೋಟಿಹುಕಾನ್‌ಗೆ ‘ದೇವರ ನಗರ’ ಎಂಬ ಖ್ಯಾತಿಯಿದೆ. ದೇವರು ಇಲ್ಲಿಯೇ ನೆಲೆಸಿ ಇಡೀ ವಿಶ್ವವನ್ನು ಸೃಷ್ಟಿಸಿದ ಎಂಬ ಕಥೆ ಇದರ ಹಿಂದಿದೆ. ವಾಸ್ತುಶಿಲ್ಪ, ಮಾನವ ಶಾಸ್ತ್ರೀಯವಾಗಿಯೂ ಈ ಸ್ಥಳ ಮಹತ್ವ ಗಿಟ್ಟಿಸಿಕೊಂಡಿದೆ. ಖಗೋಳಶಾಸ್ತ್ರದ ಕುರಿತು ಆಳವಾದ ಜ್ಞಾನ ಹೊಂದಿದ್ದ ನಾಗರಿಕತೆ ಇಲ್ಲಿ ಜೀವ ತಳೆದಿದ್ದ ಉದಾಹರಣೆಗಳು ದೊರೆಯುತ್ತವೆ.

ಟಿಯೋಟಿಹುಕಾನ್ ಕ್ರಿ.ಪೂ. 200ರವರೆಗೂ